<u>ಪಿಡಬ್ಲ್ಯೂ2</u>

<u>ದಿನಾಂಕಃ 27-11-2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ</u>

ನಾನು ಆರೋಪಿ ಜೊತೆಯಲ್ಲಿ ಯಾವುದೇ ವ್ಯವಹಾರ ಇಲ್ಲ. ನಾವಿಬ್ಬರೂ ಒಂದೇ ಜನಾಂಗದವರೂ ಅಲ್ಲ. ನಮ್ಮಿಬ್ಬರ ಮನೆ ಒಂದೇ ಬಡಾವಣೆಯಲ್ಲಲ್ಲ. ಪತ್ರಿಕೆಯನ್ನು ನಾನು ಯಾವಾಗಲೂ ತೆಗೆದುಕೊಂಡಿರುವುದಿಲ್ಲ. ನಾನು ಸಿಮೆಂಟ್ ಅಂಗಡಿ ಇಟ್ಟಿದ್ದೇನೆ. 7-8 ವರ್ಷದಿಂದ ನಾನು ಆರೋಪಿತನನ್ನು ಮಾತನಾಡಿಸಿಲ್ಲ. ಆರೋಪಿತನನ್ನು ಮುಂಚೆ ಪತ್ರಿಕೆಯಲ್ಲಿ ನೋಡಿಲ್ಲ. ಜನವರಿ-ಫೆಬ್ರವರಿ-2017 ರಲ್ಲಿ ಪತ್ರಿಕೆ ಪ್ರಕಟಣೆ ಬಗ್ಗೆ ನನಗೆ ಗೊತ್ತಾಯಿತು. ಪಿರ್ಯಾದಿ ನನಗೆ ಸುಮಾರು 10-15 ವರ್ಷದಿಂದ ಪರಿಚಯ. ಪಿರ್ಯಾದಿ ಸಿಮೆಂಟ್ ವ್ಯಾಪಾರ ಮಾಡುವುದಿಲ್ಲ. ನನ್ನ ಹತ್ತಿರ ಅವರು ಸಿಮೆಂಟ್ ಖರೀದಿಸಿರುವುದಿಲ್ಲ. ಪಿರ್ಯಾದಿಯ ಮನೆ ಸುಭಾಷ್ ನಗರದಲ್ಲಿದ್ದು ನಾನು ಹೆಂಜಗೊಂಡನಹಳ್ಳಿದ್ದು ಸುಮಾರು 3-4 ಕಿ.ಮೀ. ದೂರ ಆಗುತ್ತದೆ.

ಪಿರ್ಯಾದಿ ಉದಯ ಟಿವಿ ನಲ್ಲಿ ಕೆಲಸ ಮಾಡುತ್ತಾರೆ ಹಾಗೂ ಪತ್ರಕರ್ತರು ಎಂದು ಗೊತ್ತು. ಪಿರ್ಯಾದಿಯ ಮೂಲಕ ನಾನು ಯಾವುದೇ ಪತ್ರಿಕಾ ಪ್ರಕಟಣೆ ಹಾಗೂ ಸುದ್ದಿಯನ್ನು ಕೊಟ್ಟಿರುವುದಿಲ್ಲ. ಸದರಿಯವರು ಪತ್ರಿಕಾ ವರದಿಗಾರರು ಎಂದು ನನಗೆ ಯಾವುದೇ ದಾಖಲೆ ತೋರಿಸಿರಲಿಲ್ಲ. ಆರೋಪಿ ಪತ್ರಿಕೆಯನ್ನು ಯಾರು ಯಾರಿಗೆ ಎಲ್ಲಿ, ಎಷ್ಟು ಹಂಚುತ್ತಾರೆಂದು ನನಗೆ ಮಾಹಿತಿ ಇಲ್ಲ. ನನ್ನ ಅಂಗಡಿಯ ಹತ್ತಿರ ಪತ್ರಿಕೆಯ ವಿಷಯ ಯಾರು ಮಾತನಾಡಿರಲಿಲ್ಲ. ಆರೋಪಿ ನನ್ನ ಅಂಗಡಿಗೆ ಬಂದು ಪತ್ರಿಕೆಯನ್ನು ಯಾವತ್ತೂ ಕೊಟ್ಟಿರಲಿಲ್ಲ. ಆರೋಪಿ ಯಾವ ಪತ್ರಿಕೆಯಲ್ಲಿ ಕೆಲಸ ಮಾಡುತ್ತಾರೆ. ಅವರು ಏನು ವ್ಯವಹಾರ ಮಾಡುತ್ತಾರೆಂದು ಗೊತ್ತಿಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ನಿರ್ಮಲ ಕೆ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. 27-11-2019.